**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ: ಇ-ಆಡಳಿತ/ ಗ್ರೂ-ಎ.ಅಧಿ.ಮಾಹಿತಿ:02/2018-19** **ದಿನಾಂಕ:20-08-2019**

**ಜ್ಞಾಪನ**

**ವಿಷಯ**: e-PAR ಮೂಲಕ 2018-19 ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯನ್ನು ಭರ್ತಿಮಾಡಲು ಅಗತ್ಯ ಮಾಹಿತಿ ನೀಡುವ ಬಗ್ಗೆ.

**ಉಲ್ಲೇಖ**:-೧. ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ (ಆಡಳಿತ)ರವರ ಪತ್ರ ಸಂ: ಇಡಿ 21 ಪಿಡಿಬಿ 2019 ದಿನಾಂಕ: 14.08.2019
೨. ಈ ಕಛೇರಿಯ ಈ ಮೇಲ್ ದಿನಾಂಕ:-17-08-2019

**************

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳನ್ವಯ ಗ್ರೂಪ್ –ಎ ಅಧಿಕಾರಿಗಳ 2018-19ನೇ ಸಾಲಿನ e-PAR ವರದಿಯನ್ನು ಇಂದೀಕರಿಸಲು ಎಲ್ಲಾ ಜಿಲ್ಲೆಗಳ ಗ್ರೂಪ್ ವೃಂದದ ಅಧಿಕಾರಿಗಳ ಅವಶ್ಯ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ದಿನಾಂಕ:-19-08-2019 ರಂದು ಬೆಳಗ್ಗೆ 11-00 ಗಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿತ್ತು. **ಆದಾಗ್ಯೂ ಕೆಲವು ಜಿಲ್ಲೆಗಳಿಂದ ಮಾಹಿತಿ ಸಲ್ಲಿಕೆಯಾಗಿರುವುದಿಲ್ಲ ಕೆಲವು ಜಿಲ್ಲೆಗಳಿಂದ ತಪ್ಪು ಮಾಹಿತಿ ಅಥವಾ ಅಪೂರ್ಣ ಮಾಹಿತಿ ಸಲ್ಲಿಕೆಯಾಗಿರುತ್ತದೆ. ಈ-ಮೇಲ್ ಮೂಲಕ ನೀಡಿರುವ ಒಂದು ಜಿಲ್ಲೆಯ ಉದಾಹರಣೆಯನ್ನು ಸರಿಯಾಗಿ ಅವಲೋಕಿಸಿ, ಅದರಂತೆ ಅಧಿಕಾರಿಗಳ ಅವಧಿ ಸಹಿತ ಕಛೇರಿ ವಿವರ,** ವರದಿ ಮಾಡುವ ಪ್ರಾಧಿಕಾರ, ಪುನರ್ ಅವಲೋಕನಾ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರದ ಅಧಿಕಾರಿಗಳ ಹೆಸರು (ಆಂಗ್ಲ ಭಾಷೆಯಲ್ಲಿ) ಮತ್ತು ಅವಧಿ ಸಹಿತ **ನಿಖರ ಮಾಹಿತಿಯನ್ನು ದಿನಾಂಕ:-20-08-2019ರಂದು ಅಪರಾಹ್ನ 3-30ರೊಳಗೆ ಕಡ್ಡಾಯವಾಗಿ** sadpiegov1@gmail.com ಕಳುಹಿಸಲು ಸೂಚಿಸಿದೆ.

ಸದರಿ ಮಾಹಿತಿಯನ್ನು ಅತೀ ತುರ್ತಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ನಿಗದಿತ ಅವಧಿಯೊಳಗೆ ಕಡ್ಡಾಯವಾಗಿ ಕಳುಹಿಸುವುದು. ಯಾವುದೇ ಅಧಿಕಾರಿಯ ಮಾಹಿತಿ ಬಿಟ್ಟು ಹೋದಲ್ಲಿ ಆಯಾ ಕಛೇರಿ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.

( ಅರುಳ್ ಕುಮಾರ್)
ಜಂಟಿ ನಿರ್ದೇಶಕರು (ಆಡಳಿತ)

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

4. ನಿರ್ದೇಶಕರು, ಕ.ಪ್ರೌ.ಶಿ.ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು, ಭಾಷಾ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು, ಸಿಸ್ಲೆಪ್ , ಧಾರವಾಡ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
8. ವಿಶೇಷಾಧಿಕಾರಿಗಳು ಹಾಗೂ ವಿಭಾಗೀಯ ಸಹನಿರ್ದೇಶಕರು , ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
9. ವಿಭಾಗೀಯ ಸಹನಿರ್ದೇಶಕರು, ಮೈಸೂರು ವಿಭಾಗ/ಬೆಳಗಾಂ ವಿಭಾಗ/ಕಲ್ಬುರ್ಗಿ ವಿಭಾಗ, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
10. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
11. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸಿಟಿಇ ಗಳು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
12. ಉಪನಿರ್ದೇಶಕರು (ಟಿಬಿಎಫ್), ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
13. ಉಪನಿರ್ದೇಶಕರು (ಆಡಳಿತ), ಬೆಂಗಳೂರು/ಮೈಸೂರು/ಕಲ್ಬುರ್ಗಿ/ಬೆಳಗಾಂ ವಿಭಾಗದ ಎಲ್ಲಾ ಜಿಲ್ಲೆಗಳು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14. ಉಪನಿರ್ದೇಶಕರು (ಅಭಿವೃದ್ಧಿ), ಬೆಂಗಳೂರು/ಮೈಸೂರು/ಕಲ್ಬುರ್ಗಿ/ಬೆಳಗಾಂ ವಿಭಾಗದ ಎಲ್ಲಾ ಜಿಲ್ಲೆಗಳು, ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
15. ಕಛೇರಿ ಪ್ರತಿ